817 (989) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳು ಸಂಪೂರ್ಣವಾಗಿ ನಾಶದ ಅಂಚಿನಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಹಾಗಿದ್ದಲ್ಲಿ, ಸಣ್ಣ ಕೈಗಾರಿಕೆಗಳ ಸಮಗ್ರ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮ ಏನು ?

ಶ್ರೀ ಶಿವಾನಂದ ಎಸ್ ನಾಯಕ್ (ಸಣ್ಣ ಕೈಗಾರಿಕಾ ಸಚಿವರು)

ಅ) ರಾಜ್ಯದಲ್ಲಿ ಆರ್ ಬಿ ಐ ಪ್ರಕಾರ ದಿನಾಂಕ 31-3-2006 (2005-06)ರ ಅಂತ್ಯಕ್ಕೆ 4932 ಸಣ್ಣ ಕೈಗಾರಿಕೆಗಳನ್ನು ರೋಗಗ್ರಸ್ಥವೆಂದು ಗುರುತಿಸಲಾಗಿದೆ

ಆ) 1) ರಾಜ್ಯದಲ್ಲಿರುವ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳನ್ನು ಸರ್ಕಾರದ ಆದೇಶ ಸಂಖ್ಯೆ ಸಿಐ 406 ಎಸ್‌ಪಿಐ 2006 (ಪಿ-1), ದಿನಾಂಕ 22-1-2007ರಂತೆ ಪುನಃಶ್ಚೇತನಗೊಳಿಸಲು ರಿಯಾಯಿತಿಗಳನ್ನು ಹಣಕಾಸು ಸಂಸ್ಥೆಯವರು ಪುನಃಶ್ಚೇತನ ಘಟಕದ ಸಂದಾಯ ಮಾಡುವ ಶಕ್ತಿಯ ಆಧಾರದ ವರದಿಯ ಮೇರೆಗೆ ನೀಡಲು ಅವಕಾಶ ನೀಡಲಾಗಿದೆ

2) ಹೊಸ ಕೈಗಾರಿಕಾ ನೀತಿ 2006-11ರ ಅನ್ವಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ವಿವಿಧ ರೀತಿಯ ಸಹಾಯ ಮತ್ತು ಸೌಲಭ್ಯಗಳನ್ನು ನೀಡಲಾಗುತ್ತದೆ

3) ಹಾಲಿಯಲ್ಲಿರುವ ಕೈಗಾರಿಕಾ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

819 (991) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿ ಇದುವರೆಗೂ ರೈತರಿಂದ ವಶಪಡಿಸಿಕೊಂಡಿರುವ ಜಮೀನು ಎಷ್ಟು ,

ಆ) ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಜಮೀನನ್ನು ವಶಪಡಿಸಿಕೊಳ್ಳಲಾಗಿದೆ ,

ಇ) ಮಂಡಳಿಯ ಯಾವ ಉದ್ದೇಶಕ್ಕೆ ಹಾಗೂ ಕಾರ್ಯಕ್ರಮಗಳಿಗೆ ಈ ಜಮೀನನ್ನು ಬಳಸಲಾಗಿದೆ

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಬಿವೃದ್ಧಿ ಮಂಡಳಿಯ ವತಿಯಿಂದ ಕೈಗಾರಿಕಾ ಪ್ರದೇಶಾಭಿವೃದ್ಧಿಗಾಗಿ ರೈತರು / ಭೂಮಾಲೀಕರಿಂದ ಈವರೆಗೆ ಒಟ್ಟಾರೆ